**OS.No.**131/2022 **PW**-1

**ದಿನಾಂಕಃ 18.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು 4ನೇ ಪ್ರತಿವಾದಿ ಪರ ಶ್ರೀ. ಹೆಚ್.ಪಿ.ಎಸ್. ವಕೀಲರಿಂದಃ**

ನನ್ನ ತಂದೆ ನನಗೆ ತಿಳಿಸದೇ ಆಸ್ತಿಯನ್ನು ಬೇರೆಯವರಿಗೆ ಮಾರಾಟ ಮಾಡಿದ್ದಕ್ಕೆ ನಾನು ಈ ದಾವೆಯನ್ನು ಸಲ್ಲಿಸಿದ್ದೇನೆ. ನನಗೆ ಬರಬೇಕಾದ ಹಿಸ್ಸೆಯನ್ನು ಕೊಟ್ಟಿಲ್ಲ, ಹೀಗಾಗಿ ನನಗೆ ಹಿಸ್ಸೆ ಬರಬೇಕು ಎಂದು ನಾನು ಈ ದಾವೆಯನ್ನು ಹಾಕಿರುತ್ತೇನೆ. ಈ ದಾವೆಯನ್ನು ನಾನು 5 ಎಕರೆ ಜಮೀನಿಗೆ ಸಂಬಂಧಪಟ್ಟಂತೆ ಹಾಕಿರುತ್ತೇನೆ. ಈಗಲೂ ಸಹಾ 5 ಎಕರೆ ಜಮೀನು ಇದೆ. ಈಗ ನಾನು ನೋಡುತ್ತಿರುವ ಖರೀದಿ ಪತ್ರದ ಆನ್ ಲೈನ್ ಪ್ರತಿಯಲ್ಲಿರುವ ಸಹಿ ನನ್ನದು ಎಂದರೆ ಸರಿ. ಅದೇ ರೀತಿ ಸದರಿ ಖರೀದಿ ಪತ್ರದಲ್ಲಿರುವ ಉಳಿದ ಸಹಿಗಳನ್ನು ಸಾಕ್ಷಿಗೆ ತೋರಿಸಲಾಗಿ ಅದರಲ್ಲಿರುವ ತಾಯಿ, ತಂದೆ ಮತ್ತು ತಮ್ಮನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಸದರಿ ಖರೀದಿ ಪತ್ರದ ಆನ್ ಲೈನ್ ಪ್ರತಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ಅಭಿಮುಖವಾಗಿ **ನಿಡಿ.1** ಎಂದು ಗುರುತಿಸಲಾಯಿತು. ನಿಡಿ.1 ರಲ್ಲಿರುವ ತನ್ನ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ, ಅವುಗಳನ್ನು **ನಿಡಿ.1(ಎ)** ರಿಂದ **1(ಎಫ್)** ಎಂದು ಗುರುತಿಸಲಾಯಿತು. ಸಾಕ್ಷಿ ನಿಡಿ.1 ರಲ್ಲಿರುವ 1ನೇ ಪ್ರತಿವಾದಿಯ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ **ನಿಡಿ.1(ಜಿ)** ರಿಂದ **(ಎಲ್)** ಎಂದು ಗುರುತಿಸಲಾಯಿತು. ಸಾಕ್ಷಿ ನಿಡಿ.1 ರಲ್ಲಿರುವ 2ನೇ ಪ್ರತಿವಾದಿಯ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ **ನಿಡಿ.1(ಎಂ)** ರಿಂದ **(ಆರ್)** ಎಂದು ಗುರುತಿಸಲಾಯಿತು. ಸಾಕ್ಷಿ ನಿಡಿ.1 ರಲ್ಲಿರುವ 3ನೇ ಪ್ರತಿವಾದಿಯ ಸಹಿಯನ್ನು ನೋಡಿ

ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ **ನಿಡಿ.1(ಎಸ್)** ರಿಂದ **(ಎಕ್ಸ್)** ಎಂದು ಗುರುತಿಸಲಾಯಿತು.

ಈ ದಾವೆಯನ್ನು ನಾನು ಮಾಕಬಳ್ಳಿ ಗ್ರಾಮದ ಸ.ನಂ.35 ಕ್ಕೆ ಸಂಬಂದಿಸಿದಂತೆ ಸಲ್ಲಿಸಿರುತ್ತೇನೆ. ನಿಡಿ.1 ರಲ್ಲಿರುವ ಆಸ್ತಿಯನ್ನು ನಾನು ಹಾಗೂ 1 ರಿಂದ 3ನೇ ಪ್ರತಿವಾದಿಗಳು ಸೇರಿಯೇ ಮಾರಾಟ ಮಾಡಿದ್ದೇವೆ ಎಂದರೆ ಹೌದು. ನಾನು ಈ ದಾವೆಯನ್ನು ದಿಃ 17.10.2022 ರಂದು ಸಲ್ಲಿಸಿದ್ದೇನೆ ಎಂದರೆ ಹೌದು. ಈ ಪ್ರಕರಣದಲ್ಲಿ 4ನೇ ಪ್ರತಿವಾದಿ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ ಎಂದರೆ ಹೌದು. ನಿಪಿ.7 ರಲ್ಲಿರುವ ಸಹಿಗಳು 1 ರಿಂದ 3ನೇ ಪ್ರತಿವಾದಿಯರದ್ದು ಎಂದರೆ ಹೌದು. ನಿಪಿ.7ರ ದಾಖಲಾತಿಯ ಬಗ್ಗೆ ನಾನು ದಾವೆ ಸಲ್ಲಿಸುವ ಸಮಯಕ್ಕೆ ತಿಳಿದುಕೊಡಿದ್ದೆ ಎಂದರೆ ಹೌದು. ಈ ದಾವೆ ಚಾಲ್ತಿಯಲ್ಲಿರುವಾಗ ನಾನು ಮತ್ತು 1 ರಿಂದ 3ನೇ ಪ್ರತಿವಾದಿಗಳು ದಾವಾ ಆಸ್ತಿಯ ಪೈಕಿ 1 ಎಕರೆ 20 ಗುಂಟೆ ಆಸ್ತಿಯನ್ನು ಮಾರಾಟ ಮಾಡಿದ್ದೇವೆ ಎಂದರೆ ಹೌದು. ಈಗ ದಾವಾ ಆಸ್ತಿಯಲ್ಲಿಯ 5 ಎಕರೆ ಆಸ್ತಿ ನಮ್ಮ ಸ್ವಾಧೀನದಲಿಲ್ಲ ಎಂದರೆ ಹೌದು. ಈ ವಿಷಯವನ್ನು ನಾವು ನಮ್ಮ ವಕೀಲರಿಗೆ ತಿಳಿಸಿರುತ್ತೇನೆ. 1 ಎಕರೆ 20 ಗುಂಟೆ ಆಸ್ತಿಯನ್ನು ಮಾರಾಟ ಮಾಡಿದ ನಂತರ ನನ್ನ ವಾದ ಪತ್ರವನ್ನು ನಾನು ತಿದ್ದುಪಡಿ ಮಾಡಿಕೊಂಡಿಲ್ಲ.

ನನ್ನ ಕುಟುಂಬದ ದರದಿಗೋಸ್ಕರ ದಾವಾ ಆಸ್ತಿಯ ಪೈಕಿ 1 ಎಕರೆ 20 ಗುಂಟೆಯನ್ನು ಮಾರಾಟ ಮಾಡಿದ್ದೇವೆ ಎಂದರೆ ಹೌದು. 1 ರಿಂದ 3ನೇ ಪ್ರತಿವಾದಿಯರು ನಮ್ಮ ಕುಟುಂಬದ

ದರದಿಗೋಸ್ಕರ 4ನೇ ಪ್ರತಿವಾದಿಗೆ ನಿಪಿ 7 ರಂತೆ ಕ್ರಯದ ಕರಾರು ಪತ್ರ ಮಾಡಿಕೊಟ್ಟಿದ್ದರು ಎಂದರೆ ಹೌದು. ನಿಪಿ 7 ಅನ್ನು 1 ರಿಂದ 3ನೇ ಪ್ರತಿವಾದಿಗಳು ದಿಃ 05.12.2019 ರಂದು ಮಾಡಿಕೊಟ್ಟಿರುತ್ತಾರೆ ಎಂದರೆ ಹೌದು. ನಮ್ಮ ಮನೆಯಲ್ಲಿ ನಮ್ಮ ತಂದೆ ಅಂದರೆ 1ನೇ ಪ್ರತಿವಾದಿಯೇ ಕುಟುಂಬದ ಯಜಮಾನ ಎಂದರೆ ಹೌದು. ದಾವಾ ಅಸ್ತಿ ನನ್ನ ತಾತ ವೀರಪ್ಪರವರಿಗೆ ಕ್ರಯದ ಮೂಲಕ ಬಂದತಹ ಆಸ್ತಿ ಎಂದರೆ ಹೌದು. ನನ್ನ ತಾತನಿಂದ ನನ್ನ ತಂದೆಗೆ ದಾವಾ ಆಸ್ತಿ ಬಂದಿರುತ್ತದೆ ಎಂದರೆ ಹೌದು. ದಾವಾ ಆಸ್ತಿಯ ಸ್ವಾರ್ಯಜಿತ ಆಸ್ತಿ ಎಂದರೆ ಸರಿಯಲ್ಲ. ನಾನು ದ್ವಿತೀಯ ಬಿ.ಎ. ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. 3ನೇ ಪ್ರತಿವಾದಿ ಬಿ.ಕಾಂ. ಓದಿರುತ್ತಾನೆ. ನನ್ನ ಮದುವೆಯಾಗಿರುತತದೆ ಎಂದರೆ ಹೌದು. ನನ್ನ ಮದುವೆ 2007ನೇ ಇಸವಿಯಲ್ಲಿ ಆಗಿರುತ್ತದೆ. ನನ್ನ ತಂದೆಗೆ ವ್ಯವಸಾಯ ಬಿಟ್ಟರೆ ಬೇರೆ ಯಾವುದೇ ಅದಾಯ ಇರಲಿಲ್ಲ ಎಂದರೆ ಹೌದು. ದಾವಾ ಅಸ್ತಿಯ ಮೇಲೆ 1ನೇ ಪ್ರತಿವಾದಿ ಬ್ಯಾಂಕುಗಳಲ್ಲಿ ಸಾಲ ಮಾಡಿದ್ದರು ಎಂದರೆ ಹೌದು. ನನ್ನ ತಂದೆಯೇ ತಮ್ಮ ಆದಾಯದಲ್ಲಿ ನಮ್ಮನ್ನು ವಿದ್ಯಾಭ್ಯಾಸ ಮಾಡಿಸಿದ್ದಾರೆ ಎಂದರೆ ಹೌದು. ಈ ಎಲ್ಲಾ ಖರ್ಚುಗಳನ್ನು ನಿಬಾಯಿಸುವ ಸಲುವಾಗಿಯೇ, ಕುಟುಂಬದ ದರದಿಗಾಗಿ ನನ್ನ ತಂದೆ 4ನೇ ಪ್ರತಿವಾದಿಗೆ ಕ್ರಯದ ಕರಾರು ಪತ್ರ ಮಾಡಿಕೊಟ್ಟಿದ್ದರು ಎಂದರೆ ಹೌದು. 5 ಎಕರೆಗೆಯ ಪೈಕಿ 3 ಎಕರೆ 20 ಗುಂಟೆ ಆಸ್ತಿಯನ್ನು ನನ್ನ ತಂದೆ 4ನೇ ಪ್ರತಿವಾದಿಗೆ ಕ್ರಯದ ಕರಾರು ಪತ್ರ ಮಾಡಿಕೊಟ್ಟು 1 ಎಕರೆ 20 ಗುಂಟೆ ಆಸ್ತಿಯನ್ನು ಉಳಿಸಿಕೊಂಡಿದ್ದರು ಎಂದರೆ ಹೌದು. ಉತ್ತರ ಭಾಗದ 1 ಎಕರೆ 20 ಗುಂಟೆ ಆಸ್ತಿಯನ್ನು ನನ್ನ ತಂದೆ ಉಳಿಸಿಕೊಂಡು, ದಕ್ಷಿಣ ಭಾಗದ 3 ಎಕರೆ 20 ಗುಂಟೆ

ಆಸ್ತಿಯನ್ನು 4ನೇ ಪ್ರತಿವಾದಿಗೆ ಕ್ರಯದ ಕರಾರು ಪತ್ರ ಮಾಡಿಕೊಟ್ಟಿದ್ದರು ಎಂದರೆ ಹೌದು. 24 ಲಕ್ಷ ಹಣಕ್ಕೆ ಕ್ರಯದ ಕರಾರು ಪತ್ರವಾಗಿ 4ನೇ ಪ್ರತಿವಾದಿಯಿಂದ 5 ಲಕ್ಷ ರೂ.ಗಳ ಮುಂಗಡ ಹಣವನ್ನು ನನ್ನ ತಂದೆ ಪಡೆದುಕೊಂಡಿದ್ದರು ಎಂದರೆ ಹೌದು. ಸದರಿ 5 ಲಕ್ಷ ಹಣದಿಂದ ನನ್ನ ತಂದೆ ಎಲ್ಲಾ ಸಾಲವನ್ನು ತೀರಿಸಿಕೊಂಡರು ಎಂದರೆ ಗೊತ್ತಿಲ್ಲ. 1 ಎಕರೆ 20 ಗುಂಟೆಯನ್ನು ನನ್ನ ತಂದೆ ನನ್ನ ಭಾಗಕ್ಕೆ ಉಳಿಸಿಕೊಂಡು ಉಳಿದ 3 ಎಕರೆ 20 ಗುಂಟೆಯನ್ನು 4ನೇ ಪ್ರತಿವಾದಿಗೆ ಕ್ರಯದ ಕರಾರು ಪತ್ರ ಮಾಡಿಕೊಟ್ಟಿದ್ದರು ಎಂದರೆ ಹೌದು.

1 ರಿಂದ 3ನೇ ಪ್ರತಿವಾದಿಯರು ಕ್ರಯದ ಕರಾರು ಪತ್ರ ಮಾಡಿಕೊಟ್ಟ ನಂತರ 4ನೇ ಪ್ರತಿವಾದಿಗೆ ಶುದ್ದ ಕ್ರಯಪತ್ರ ಬರೆದುಕೊಡದೇ ಇದುದ್ದರಿಂದ 4ನೇ ಪ್ರತಿವಾದಿ ಇದೇ ನ್ಯಾಯಾಲಯದ ಮುಂದೆ ಅಸಲು ದಾವೆ ನಂ.27/2021 ರಂತೆ ದಾವೆ ಸಲ್ಲಿಸಿರುತ್ತಾರೆ ಎಂದರೆ ಹೌದು. ನಿಪಿ.7 ರಂತೆ 1ರಿಂದ 3ನೇ ಪ್ರತಿವಾದಿಯರು 4ನೇ ಪ್ರತಿವಾದಿಗೆ ಶುದ್ದ ಕ್ರಯ ಪತ್ರ ಬರೆದುಕೊಡದೇ ನನ್ನ ಮೂಲಕ ಈ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಉಳಿಸಿಕೊಂಡಿದ್ದ 1 ಎಕರೆ 20 ಗುಂಟೆ ಆಸ್ತಿಯನ್ನು ನನ್ನ ದರದಿಗೋಸ್ಕರ ನೇತ್ರಾವತಿ, ನಂದಿನಿ ಮತ್ತು ಅಮೃತ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1 ಎಕರೆ 20 ಗುಂಟೆ ಆಸ್ತಿಯ ಮಾರಾಟ ಹಣವನ್ನು ನಾನೇ ಪಡೆದಿರುತ್ತೇನೆ ಎಂದರೆ ಸರಿಯಲ್ಲ. 1 ಎಕರೆ 20 ಗುಂಟೆ ಆಸ್ತಿಯನ್ನು ನಿಡಿ.1 ರಂತೆ ಮಾರಾಟ ಮಾಡಿದ್ದನ್ನು ನ್ಯಾಯಾಲಯಕ್ಕೆ ತಿಳಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನನ್ನ ಹಿಸ್ಸೆಯ ಭಾಗವನ್ನು ಈಗಾಗಲೇ ನಿಡಿ.1 ರಂತೆ ನೇತ್ರಾವತಿ, ನಂದಿನಿ ಮತ್ತು ಅಮೃತರವರಿಗೆ ಮಾರಾಟ ಮಾಡಿದ್ದರಿಂದ ನನ್ನ ಹಿಸ್ಸೆಯ ಭಾಗ

ಯಾವುದು ಉಳಿದಿಲ್ಲ ಎಂದರೆ ಸರಿಯಲ್ಲ. ನಿಡಿ.1 ರಲ್ಲಿರುವ ಅಸ್ತಿಯ ಚೆಕ್ಕುಬಂದಿಯನ್ನು ನನ್ನ ತಂದೆಯೇ ಹೇಳಿ ಬರೆಸಿರುತ್ತಾರೆ ಎಂದರೆ ಹೌದು. ನಿಡಿ.1 ರಲ್ಲಿ ಚೆಕ್ಕುಬಂದಿಯನ್ನು ಬರೆಸುವಾಗ ನನ್ನ ತಂದೆ ನಿಪಿ.7 ಅನ್ನೂ ಸಹಾ ಇಟ್ಟುಕೊಂಡೇ ಬರೆಸಿರುತ್ತಾರೆ ಎಂದರೆ ಗೊತ್ತಿಲ್ಲ. ನಿಪಿ.7 ಕ್ಕೆ ಚೆಕ್ಕುಬಂದಿಯನ್ನು ನನ್ನ ತಂದೆಯೇ ಹೇಳಿ ಬರೆಸಿರುತ್ತಾರೆ ಎಂದರೆ ಹೌದು. ನಿಪಿ.7ರ ಆಸ್ತಿಯ ಒಳಗೇ ನಿಡಿ.1 ಚೆಕ್ಕುಬಂದಿಯನ್ನೂ ಸಹಾ ನನ್ನ ತಂದೆ ಬರೆಸಿರುತ್ತಾರೆ ಎಂದರೆ ಗೊತ್ತಿಲ್ಲ. ನಿಪಿ.7 ರ ಆಸ್ತಿಯ ಉತ್ತರಕ್ಕೆ ಮಾರಾಟ ಮಾಡಿದ 1 ಎಕರ 20 ಗುಂಟೆ ಆಸ್ತಿಯನ್ನು ತೋರಿಸದೇ ನಿಪಿ.7 ರಲ್ಲಿ ನನ್ನ ತಂದೆ ಮಾರಾಟ ಮಾಡಿದ ಆಸ್ತಿಯನ್ನೂ ಸೇರಿಸಿಯೇ ಚೆಕ್ಕುಬಂದಿ ಬರೆದುಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. 4ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದಲೇ ನನ್ನ ತಂದೆ ನನ್ನ ಮ್ಮೂಲಕ ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದರಿಂದ ನಾನು ದಾವೆಯಲ್ಲಿ ಕೇಳಿಕೊಂಡ ಪರಿಹಾರಕ್ಕೆ ಅರ್ಹಳಲ್ಲ ಎಂದರೆ ಸರಿಯಲ್ಲ.

ಶ್ರೀ ಬಿ.ಎನ್.ಕೆ. ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಇದೆ.

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.